ನೋಡಿರಲಿಲ್ಲ. ಅವಳು ಹಿಂದೆಂದಿಗಿಂತಲೂ ರೂಪವತಿಯಾಗಿ ಕಾಣುತಿದ್ದಳು. ಮೆಲ್ಲಗೆ ಹೇಮಾ ಎಂದು ಕೂಗಿದೆ. ತಕ್ಷಣವೇ ಎಚ್ಚೆತ್ತುಕೊಂಡವಳಂತೆ ನನ್ನತ್ತ ತಿರುಗಿದವಳು ಓ.. ಹೇಗಿದ್ದೀರಾ.. ಎಂದು ಕ್ಷೀಣದನಿಯಲ್ಲಿ ಕೇಳಿ ಬಲವಂತವಾಗಿ ಮುಗುಳ್ನಕ್ಕಳು.

ನಾನು ಬಾ ಕುಳಿತುಕೋ.. ಎಂದು ಬಗ್ಗಿ ಕಾರಿನ ಬಾಗಿಲು ತೆಗೆದೆ. ಕಾರು ಹತ್ತಿ ಪಕ್ಕದಲ್ಲಿ ಕುಳಿತವಳ ಜಡೆಯಲ್ಲಿ ಬಾಡಿದ್ದ ಮಲ್ಲಿಗೆ ಹೂವಿನಮಾಲೆಯ ಪರಿಮಳ ಇನ್ನೂ ಘಮಘಮಿಸುತಿತ್ತು. ಅವಳ ಬಸವಳಿದ ಮುಖ ನೋಡಿ ಬೆಳಗಿನಿಂದ ಹಸಿದುಕೊಂಡು ಇಲ್ಲೇ ಕಾಯುತ್ತಿರಬಹುದು ಎಂದೆನಿಸಿ ಅವರ್ಣನೀಯ ಸಂಕಟವಾಯಿತು. ಬೆಳಗಿನಿಂದ ಇಲ್ಲೇ ಇದ್ದೆಯಾ ಎಂದು ಕೇಳಿದರೆ ಅವಳ ಎದುರಿನಲ್ಲಿ ನಾನು ದುರ್ಬಲನಾಗುತ್ತೇನೇನೋ ಎಂಬ ಭೀತಿಯಿಂದ ಏನನ್ನೂ ಕೇಳಲಿಲ್ಲ.

ಕಾರನ್ನು ಮುಂದೆ ನಡೆಸಿಕೊಂಡು ಹೋಗುತ್ತಲೇ ಅವಳತ್ತ ಇಣುಕು ನೋಟ ಬೀರಿದೆ. ಅತೀವ ಆತಂಕದಿಂದ ಸೀಟಿನಲ್ಲಿ ಮುದುಡಿ ಕುಳಿತಿದ್ದಳು. ಹಣೆಯಲ್ಲಿ ಬೆವರಿನ ಹನಿಗಳು ಮುತ್ತಿನ ಮಣಿಗಳಂತೆ ಸಾಲುಗಟ್ಟಿದ್ದವು. ಕೈಗಳ ನೀಳ ಬೆರಳುಗಳನ್ನು ಒಂದರೊಳಗೊಂದು ಬಿಗಿಯಾಗಿ ಹೊಸೆದುಕೊಂಡು ಮಡಿಲಲ್ಲಿದ್ದ ನಸುಗೆಂಪಿನ ಸಣ್ಣ ಕರವಸ್ತ್ರ ಮತ್ತು ಪುಟ್ಟದಾದ ಮಾಸಿದ ಬಿಳಿಯ ಬಣ್ಣದ ಪರ್ಸ್‌ನ ಮೇಲೆ ಒತ್ತಿ ಹಿಡಿದುಕೊಂಡಿದ್ದಳು.

ವಿಶಾಲವಾದ ರಸ್ತೆಯಲ್ಲಿ ವಾಹನಗಳ ಸಂಚಾರ ವಿರಳವಾಗಿತ್ತು. ಆಕಾಶದಲ್ಲಿ ಮೋಡ ಕವಿದು ಸೂರ್ಯ ಮರೆಯಾಗಿ ಮಸುಕುಬೆಳಕು ಸುತ್ತಲೂ ಪಸರಿಸಿತ್ತು.

ಇಲ್ಲೇ ಮುಂದೆ ಹೊಟೇಲಿದೆ.. ಅಲ್ಲಿಗೆ ಹೋಗೋಣ.. ಮೌನ ಮುರಿದು ನಾನೇ ಮಾತನಾಡಿದೆ.

ಹೊಟೇಲಿಗೆ ಹೋಗೋದು ಬೇಡ.. ಅಲ್ಲಿ ಬೇರೆ ಯಾರಾದರೂ ಇರ್ತಾರೆ.. ಎಂದು ನಡುಗುತ್ತಿದ್ದ ಮತ್ತು ಆತಂಕ ತುಂಬಿದ ದನಿಯಲ್ಲಿ ನುಡಿದಳು. ಅವಳು ಮಧ್ಯಾಹ್ನದಿಂದ ಹಸಿದುಕೊಂಡಿದ್ದಾಳೆ ಏನಾದರೂ ತಿನ್ನಲಿ ಮೊದಲು ಹೊಟೇಲಿಗೆ ಕರೆದುಕೊಂಡು ಹೋಗು ಎಂದು ನನ್ನೊಳಗಿದ್ದ ಮನುಷ್ಯತ್ವ ಎಚ್ಚರಿಸಿತು. ಆದರೆ ನಾನು ಅದನ್ನೂ ನನ್ನ ದೌರ್ಬಲ್ಯವೆಂದೇ ತಿಳಿದು ಮನಸ್ಸು ಗಟ್ಟಿ ಮಾಡಿಕೊಂಡು ಕಾರನ್ನು ಅರ್ಧ ಕಿಲೋಮೀಟರ್ ದೂರ ವೇಗವಾಗಿ ನಡೆಸಿಕೊಂಡು ಹೋಗಿ ರಸ್ತೆಯ ಬದಿಯಲ್ಲಿದ್ದ ಒಂದು ಎತ್ತರದ ಮರದ ಕೆಳಗೆ ನಿಲ್ಲಿಸಿದೆ. ತುಸು ದೂರದಲ್ಲಿ ಬ್ಲೂ ಮೂನ್ ಹೊಟೇಲ್ ಕಾಣಿಸುತಿತ್ತು.

ಅವಳು ಮಾತನಾಡಲು ಪದಗಳನ್ನು ಹುಡುಕುತ್ತಿದ್ದಂತೆ ತಿಣುಕಾಡುತ್ತಿದ್ದಳು. ನಾನೇ ಪ್ರಾರಂಭಿಸಿದೆ.

ಏನು.. ನನ್ನನ್ನು ಫ್ಯಾಕ್ಟರಿಯವರೆಗೂ ಹುಡುಕಿಕೊಂಡು ಬಂದದ್ದು.. ಎಲ್ಲಾ ತಿಳಿದಿದ್ದರೂ ಅವಳತ್ತ ತಿರುಗಿ ತುಸು ಗತ್ತಿನಲ್ಲಿಯೇ ಮಾತನಾಡಿದೆ.

ತೊಂದರೆಯಾಯಿತಾ.. ಎಂದು ನನ್ನತ್ತ ತಿರುಗಿ ಒಂದು ಕ್ಷಣ ನನ್ನನ್ನೇ ದಿಟ್ಟಿಸಿ ನೋಡಿದಳು. ತಕ್ಷಣವೇ ನಾನು ತುಸು ಮೆದುವಾದೆ.

ಹಾಗೇನೂ ಇಲ್ಲ.. ನೀನು ಬಂದ ವಿಷಯವೇನೆಂದು ಹೇಳು.. ಕೃತಕ ಮುಗುಳ್ನಗೆಯೊಂದನ್ನು ಚೆಲ್ಲಿ ಮೆಲ್ಲಗೆ ನುಡಿದೆ.

ಅವಳು ಎದುರಿಗಿದ್ದ ರಸ್ತೆಯನ್ನೇ ತದೇಕಚಿತ್ತದಿಂದ ನೋಡುತ್ತಿದ್ದಳು. ಅವಳ ಕೊಳದಂತಹ ಕಣ್ಣುಗಳ ಅಂಚಿನಲ್ಲಿ ಕಣ್ಣೀರಿನ ಪಸೆ ಒಸರುತಿತ್ತು.

'ನಾನು ನಿಮ್ಮನ್ನ ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸ್ತಾ ಇದೀನಿ.. ನಿಮ್ಮನ್ನು ಬಿಟ್ಟು ಬದುಕುವ ಶಕ್ತಿ ನನಗಿಲ್ಲ. ಅವಳ ದನಿ ತೀವ್ರವಾಗಿ ಕಂಪಿಸುತಿತ್ತು. ನುಣುಪಾದ ಕೆನ್ನೆಯ ಮೇಲೆ ಎರಡು ಹನಿ ಕಣ್ಣೀರು ಒಂದರ ಹಿಂದೆ ಒಂದರಂತೆ ಜಾರಿದವು.

ಹೇಮಾ.. ನೀನು ನಮ್ಮಿಬ್ಬರ ಸ್ನೇಹವನ್ನು ತಪ್ಪಾಗಿ ಅರ್ಥ ಮಾಡಿಕೊಂಡು ನನ್ನ ಬಗ್ಗೆ ಒಂದು ಆಕರ್ಷಣೆಯನ್ನು ಬೆಳೆಸಿಕೊಂಡಿದ್ದೀಯಾ.. ಆಕರ್ಷಣೆ ಎಂದಿಗೂ ಪ್ರೀತಿಯಾಗಲಾರದು.. ಅದೊಂದು ಮಾನಸಿಕ ದೌರ್ಬಲ್ಯ ಅಷ್ಟೇ.. ಪ್ರೀತಿ ಎಂದರೆ ಒಂದು ಗಂಡು ಮತ್ತು ಒಂದು ಹೆಣ್ಣು ಇಬ್ಬರೂ ಇಷ್ಟಪಟ್ಟು ಬೆಳೆಸಿಕೊಂಡ ಒಂದು ಭಾವನಾತ್ಮಕ ಸಂಬಂಧ.. ನಿನ್ನ ಬಗ್ಗೆ ನನಗೆ ಅಂತಹ ಭಾವನೆಗಳು ಖಂಡಿತವಾಗಿಯೂ ಇಲ್ಲ..' ನಾನು ದೃಢವಾಗಿ ಹೇಳಿದೆ.

'ಪ್ಲೀಸ್.. ದಯವಿಟ್ಟು ಹಾಗೆನ್ನಬೇಡಿ.. ನಾನು ನಿಮ್ಮಷ್ಟು ಓದಿದವಳಲ್ಲ.. ನನಗೆ ಅದೆಲ್ಲಾ ಅರ್ಥ ಆಗೋದಿಲ್ಲ.. ನನಗೆ ನನ್ನ ಅಪ್ಪ, ಅಮ್ಮ ಮತ್ತು ನಿಮ್ಮನ್ನು ಬಿಟ್ಟರೆ ಈ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ.. ನನಗೆ

## ಇಲ್ಲಿಯವರೆಗೆ



ಖಾಸಗಿ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುವ ಸುನಿಲ್‌ಕುಮಾರ್, ಹೆಂಡತಿ ಶರಧಿ ಜತೆ ಸುಂದರ ಸಂಸಾರ. ಸುನಿಲ್ ಮನೆಯಲ್ಲಿ ಇಲ್ಲದ ವೇಳೆ ಒಬ್ಬ ಆಗಂತುಕ ಸುನಿಲ್‌ನನ್ನು ಕೇಳಿಕೊಂಡು ಮನೆಗೆ ಬರುತ್ತಾನೆ. ಶರಧಿಯ ಬಳಿ ಸುನಿಲ್ ಬಗ್ಗೆ ಗೊತ್ತು, ಆತನನ್ನೇ ಭೇಟಿಯಾಗಬೇಕು ಎನ್ನುತ್ತಾನೆ. ಮತ್ತೆ ಬರುವುದಾಗಿ ಹೇಳಿ ಹೋಗುತ್ತಾನೆ. ಹೀಗೆ ಎರಡು–ಮೂರು ಸಲ ನಡೆಯುತ್ತದೆ. ಈ ಮಧ್ಯೆ ಮದುವೆಗೆ ಮುನ್ನ ಹೇಮಾವತಿ ಎಂಬ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ತರುಣಿ ಬಸ್‌ನಲ್ಲಿ ಪರಿಚಯವಾಗಿ ದಿನಾ ಸುನಿಲ್ ಜತೆಗೆ ಬಸ್‌ನಲ್ಲಿ ಓಡಾಡುತ್ತಿದ್ದದ್ದು, ಆಕೆಗೆ ವಿಸಿಟಿಂಗ್ ಕಾರ್ಡ್ ಕೊಟ್ಟದ್ದು, ದಿನಾ ಮೆಸೇಜ್ ಮಾಡುತ್ತಿದ್ದದ್ದು.. ಹೀಗೆ ನೆನಪುಗಳು ಸುನಿಲ್‌ಗೆ ಕಾಡುತ್ತದೆ.

ಬೇಕಾಗಿರುವುದು ನಿಮ್ಮ ಜೊತೆ ಪ್ರತಿದಿನ ಜೀವಿಸುವ ಒಂದು ಅವಕಾಶ ಅಷ್ಟೇ.. ಬೇಕಾದರೆ ಜೀವನಪೂರ್ತಿ ನಾನು ನಿಮ್ಮ ಸೇವಕಿಯಾಗಿರುತ್ತೇನೆ.. ನನ್ನನ್ನು ದಯವಿಟ್ಟು ದೂರ ತಳ್ಳಬೇಡಿ..' ಎಂದು ಎರಡೂ ಕೈಗಳನ್ನು ಮುಗಿದು ಬೇಡಿದಳು. ಅವಳ ಕಣ್ಣುಗಳಲ್ಲಿ ಧಾರಾಕಾರವಾಗಿ ಕಣ್ಣೀರು ಹರಿಯುತಿದ್ದುದನ್ನು ಕಂಡು ನಾನು ತುಸು ಅಪ್ರತಿಭನಾದೆ. ಆದರೆ ತೋರಗೊಡಲಿಲ್ಲ.

ನನ್ನನ್ನು ಎಲ್ಲರೂ ಗಟ್ಟಿ ಮನಸ್ಸಿನವನು ಎಂದೇ ತಿಳಿದಿದ್ದಾರೆ. ಯಾಕೆಂದರೆ ನಾನು ನನ್ನೊಳಗಿನ ಭಾವನೆಗಳನ್ನು ಮುಖದಲ್ಲಾಗಲೀ ನನ್ನ ವರ್ತನೆಯಲ್ಲಾಗಲೀ ಪ್ರದರ್ಶಿಸುವುದಿಲ್ಲ. ಹೇಮಾಳ ಮಾತುಗಳಿಂದ ನಾನು ಒಳಗೊಳಗೆ ಬೆಂದುಹೋದೆ. ಆದರೂ ಅವಳನ್ನು ನನ್ನಿಂದ ಸ್ವೀಕರಿಸಲಾಗುತ್ತಿಲ್ಲ. ಯಾಕೆಂದು ತಿಳಿಯದೇ ನನ್ನನ್ನೇ ನಾನು ಹಳಿದುಕೊಂಡೆ. ಮನಸ್ಸು ಒಪ್ಪದೆ ಅವಳನ್ನು ಸ್ವೀಕರಿಸಿದರೆ ಖಂಡಿತ ಅವಳು ನನ್ನ ಜೊತೆ ಸುಖವಾಗಿರಲಾರಳು.. ಅಂತಹ ತಪ್ಪನ್ನು ಮಾಡಬಾರದು.. ಈಗಾಗಲೇ ಸಾಕಷ್ಟು ತಪ್ಪು ಮಾಡಿಬಿಟ್ಟಿದ್ದೇನೆ.. ಎಂದು ನಿರ್ಧರಿಸಿಕೊಂಡ ತಕ್ಷಣ ಕಾದ ಕಬ್ಬಿಣ ತಂಪಾದ ಮೇಲೆ ಗಟ್ಟಿಯಾಗುವಂತೆ ನನ್ನ ಮನಸ್ಸು ದೃಢವಾಯಿತು.

'ಹೇಮಾ.. ಅದು ಎಂದೆಂದಿಗೂ ಸಾಧ್ಯವಾಗಲಾರದು.. ನನ್ನೊಂದಿಗೆ ನೀನು ಸುಖವಾಗಿ ಜೀವಿಸಲಾರೆ.. ನಿನ್ನ ಬದುಕನ್ನು ಬಲಿ ಕೊಡಲು ನಾನು ತಯಾರಿಲ್ಲ.. ದಯವಿಟ್ಟು ಅರ್ಥ ಮಾಡಿಕೋ..' ತುಸು ಗಡುಸು ದನಿಯಲ್ಲಿಯೇ ಹೇಳಿದೆ.

'ನೀವು ಬೇರೆ ಯಾರನ್ನಾದರೂ ಪ್ರೀತಿಸುತಿದ್ದೀರಾ..?'

'ಖಂಡಿತಾ ಇಲ್ಲ'

'ನೀವು ಬೇರೆ ಯಾರನ್ನಾದರೂ ಮದುವೆಯಾಗುತ್ತೀರಿ ತಾನೇ..?'

'ಹೌದು.. ಮದುವೆಯಾಗುತ್ತೇನೆ..'

'ನೀವು ಅವರನ್ನು ಮದುವೆಯಾದ ಮೇಲೆ ಪ್ರೀತಿಸುವುದಿಲ್ಲವೇ..?'

'ಪ್ರೀತಿಸುತ್ತೇನೆ..'